# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1000 (1246)

ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 07.03.2022

ಉತ್ತರಿಸುವವರು : ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಆನೆ ಹಾವಳಿಯಿಂದ ಅಲ್ಲಿನ ರೈತರಿಗೆ / ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; | ಹೌದು.<br><br>ರಾಜ್ಯದಲ್ಲಿ ಕಾಡಾನೆ ಹಾವಳಿ ತಡೆಗಟ್ಟಲು ಇಲಾಖಾ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>1. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿ ಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ.<br><br>2. ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br><br>3. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | 4. ಕಾಡಾನೆ ಹಾವಳಿ ತುರ್ತು ನಿರ್ವಹಣೆಗಾಗಿ ಕ್ಷಿಪ್ರ ಕಾರ್ಯಪಡೆ ತಂಡಗಳನ್ನು (RRT) ರಚಿಸಿ ನಿರ್ವಹಿಸಲಾಗುತ್ತಿದೆ.<br>5. ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ.<br>6. ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.<br>7. ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.<br>8. ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ.<br>9. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಅಗ್ಗಿಂದಾಗ್ಗೆ, ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.<br>10. ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಹಾನಿ ಪ್ರಕರಣಗಳಲ್ಲಿ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದ್ದು, ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಹಾನಿ ಪ್ರಕರಣಗಳಿಗೆ ಇ-ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಆದ್ಯತೆ ಮೇರೆಗೆ ನಿಯಮಾನುಸಾರ ಪರಿಶೀಲಿಸಿ, ಶೀಘ್ರವೇ ನೇರವಾಗಿ ಸಂತ್ರಸ್ಥರ ಖಾತೆಗೆ ಪಾವತಿಸುವ ಪ್ರಕ್ರಿಯೆಯನ್ನು ಇ-ಪರಿಹಾರ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ. |
| ಆ) | ಕಳೆದ 3 ವರ್ಷಗಳಿಂದ ಕೊಡಗು ಜಿಲ್ಲೆಯಲ್ಲಿ ಆನೆ ದಾಳಿಯಿಂದ ಎಷ್ಟು ರೈತರು / ಸಾರ್ವಜನಿಕರು ಮೃತಪಟ್ಟಿರುತ್ತಾರೆ; (ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಆನೆ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣ ಹಾಗೂ ದಯಾತ್ಮಕ ಧನ ಪಾವತಿಸಿದ ವಿವರವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| ಇ) | ಸರ್ಕಾರದಿಂದ ನೀಡಲಾದ ಪರಿಹಾರದ ಮೊತ್ತವೆಷ್ಟು; (ಸಂಪೂರ್ಣ ವಿವರ ನೀಡುವುದು) | |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಈ) | ಕೊಡಗು ಜಿಲ್ಲೆಯಲ್ಲಿ ಕಾಡಾನೆ ದಾಳಿಯಿಂದ ಕಾಫಿ ಬೆಳೆಯ ರೈತರಿಗೆ ಎಷ್ಟು ಹಾನಿಯಾಗಿದೆ ; ಹಾನಿಯಾದ ರೈತರಿಗೆ ಸರ್ಕಾರ ಏನಾದರೂ ಪರಿಹಾರ ನೀಡಿದೆಯೇ ? (ವಿವರ ಒದಗಿಸುವುದು) | ಕೊಡಗು ಜಿಲ್ಲೆಯಲ್ಲಿ ಕಾಡಾನೆ ದಾಳಿಯಿಂದ ಕಾಫಿ ಬೆಳೆ ಒಳಗೊಂಡಂತೆ ಇತರ ಬೆಳೆಹಾನಿ ಪ್ರಕರಣಗಳಲ್ಲಿ ಪಾವತಿಸಿದ ಪರಿಹಾರ ಧನದ ವಿವರ ಈ ಕೆಳಕಂಡಂತಿದೆ. |

(ರೂ.ಲಕ್ಷಗಳಲ್ಲಿ)

| ವರ್ಷ | ಪ್ರಕರಣ | ಮೊತ್ತ |
|---|---|---|
| ಮಡಿಕೇರಿ ವಿಭಾಗ | | |
| 2018-19 | 1117 | 54.28 |
| 2019-20 | 1259 | 73.03 |
| 2020-21 | 1428 | 96.44 |
| 2021-22 | 1487 | 97.52 |
| ಒಟ್ಟು | **5291** | **321.27** |
| ವಿರಾಜಪೇಟೆ ವಿಭಾಗ | | |
| 2018-19 | 1328 | 89.00 |
| 2019-20 | 1146 | 84.61 |
| 2020-21 | 1430 | 94.05 |
| 2021-22 | 1520 | 82.09 |
| ಒಟ್ಟು | **5424** | **349.75** |
| ವನ್ಯಜೀವಿ ವಿಭಾಗ, ಮಡಿಕೇರಿ | | |
| 2018-19 | 837 | 49.46 |
| 2019-20 | 744 | 43.94 |
| 2020-21 | 797 | 48.30 |
| 2021-22 | 586 | 33.97 |
| ಒಟ್ಟು | **2964** | **175.67** |

ಸಂಖ್ಯೆ: ಅಪಜೀ 47 ಎಫ್‌ಡಬ್ಲ್ಯೂಎಲ್ 2022

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಅನುಬಂಧ-1

# ಆನೆ ದಾಳಿಯಿಂದ ಮೃತಪಟ್ಟವರ ವಿವರ [ ದಿನಾಂಕ : 28.02.2022ರ ಅಂತ್ಯಕ್ಕೆ ]

| ವಿಭಾಗ | ಹೆಸರು | ವಿಳಾಸ | ಮೃತ ಪಟ್ಟ ದಿನಾಂಕ | ಪಾವತಿಸಿದ ಮೊತ್ತ (ಲಕ್ಷಗಳು) |
|---|---|---|---|---|
| 2018-19 | | | | |
| ಪ್ರಕರಣಇರುವುದಿಲ್ಲ | | | | |
| 2019-2020 | | | | |
| ಮಡಿಕೇರಿ | ಶ್ರೀ ಪೆಮ್ಮಯ್ಯ | ಅವರೆಗುಂದಗ್ರಾಮ | 07.02.20 | 7.50 |
| ವಿರಾಜಪೇಟೆ | ಶ್ರೀ ಮುರುದಯ್ಯ. | ಚೆನ್ನಯ್ಯನಕೊಟ್ಟೆಗ್ರಾಮತಿತಿ ಮತಿ ವಲಯ | 08.08.2019 | 5.00 |
| | ಶ್ರೀ ಫಣಿಎರವರರಾಜು | ಕುಮಟೂರು ಗ್ರಾಮ | 28.03.2020 | ವಾರಸುದಾರರ ಮಾಹಿತಿ ಲಭ್ಯವಿರುವುದಿಲ್ಲ |
| ವನ್ಯಜೀವಿ ವಿಭಾಗ | ಶ್ರೀ ಬೋಕಿರ ಸುಧಾ | ಕುಟ್ಟಪ್ಪ, ಕಾಯಿಮನೆ ಗ್ರಾಮ ವಿರಾಜಪೇಟೆ ತಾಲ್ಲೂಕು | 03.05.2019 | 5.00 |
| | ಶ್ರೀ ಕರಿಯ | ಕುಟ್ಟ ಗ್ರಾಮ ವಿರಾಜಪೇಟೆ ತಾಲ್ಲೂಕು | 21.11.2019 | 5.00 |
| 2020-2021 | | | | |
| ಮಡಿಕೇರಿ | ಶ್ರೀ ಎಂ.ಸಿ.ಲೋಕೇಶ್ | ರಂಗಸಮುದ್ರಗ್ರಾಮ ಸೋಮವಾರಪೇಟೆ ತಾಲ್ಲೂಕು | 11.04.2020 | 7.50 |
| | ಶ್ರೀ ಕುಡಿಯರಚಿಣ್ಣಪ್ಪ | ಯವಕಪಾಡಿಗ್ರಾಮ ಮಡಿಕೇರಿ | 15.06.2020 | 7.50 |
| | ಶ್ರೀಮತಿ ನೀನಾ ಮುತ್ತಣ್ಣ | ಮೊದೂರುಗ್ರಾಮ ಸೋಮವಾರಪೇಟೆ | 15.08.2020 | 7.50 |
| ವಿರಾಜಪೇಟೆ | ಶ್ರೀ ಪಣಿಎರವರ ಮಾದ | ಕೊಳತ್ತೋಡು ಬೈಗೋಡು, ವಿರಾಜಪೇಟೆ | 04.07.2020 | ವಾರಸುದಾರರ ಮಾಹಿತಿ ಲಭ್ಯವಿರುವುದಿಲ್ಲ |
| | ಶ್ರೀ ಸಂದೀಪ್ | ಸಿದ್ದಾಪುರ | 26.02.2021 | 7.50 |
| | ಶ್ರೀ ಸುಧಾಕರ್ | ಗುಹ್ಯ ಮೇಕೂರು ಹೊಸ್ಕೇರಿ | 24.03.2021 | 7.50 |
| 2021-2022 | | | | |
| ವಿರಾಜಪೇಟೆ | ಶ್ರೀಮತಿ ಲಕ್ಷ್ಮೀ | ಬಾಡಗ ಬಾಣಾಂಗಾಲ ತಿತಿಮತಿ. | 06.04.2021 | 7.50 |
| ವಿರಾಜಪೇಟೆ | ಶ್ರೀ ರಂಗಸ್ವಾಮಿ | ಅರವತೋಕ್ಲುಗ್ರಾಮ | 07.06.2021 | 7.50 |
| ಮಡಿಕೇರಿ | ಶ್ರೀ ಏಳುಮಲೈ | ವಾಲ್ನೂರು ತ್ಯಾಗತ್ತೂರು | 17.05.2021 | 7.50 |
| ನಾಗರಹೊಳೆ | ಶ್ರೀ ಮಾಣಿಕ್ಯ ಕೆ.ಎಂ | ದೇವಮಾಚ್ಚಿ ನೋಕ್ಯಗ್ರಾಮ | 28.05.2021 | 7.50 |
| ನಾಗರಹೊಳೆ | ಶ್ರೀ ಮುನಿಯನಾಯಕ್ | ಅಗಸನಹುಂಡಿ | 01.06.2021 | 7.50 |
| ಮಡಿಕೇರಿ | ಶ್ರೀ ಪಿ ಸೋಮ | ಉಲುಗುಲಿ ಗ್ರಾಮ | 29.10.2021 | 7.50 |
| ಮಡಿಕೇರಿ | ಶ್ರೀ.ಶಿವಪ್ರಸಾದ್ | ಬೆಟ್ಟತ್ತೂರು | 04.01.2022 | ಪರಿಶೀಲನಾ ಹಂತದಲ್ಲಿರುತ್ತದೆ. |
| ಮಡಿಕೇರಿ | ಶ್ರೀ ಮೊಹಮ್ಮದ್ ಅತಿಕ್ | ನೆಲ್ಯಹುದಿಕೇರಿ | 16.01.2022 | ಪರಿಶೀಲನಾ ಹಂತದಲ್ಲಿರುತ್ತದೆ. |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ವನ್ಯಜೀವಿ) & ಮುಖ್ಯ ವನ್ಯಜೀವಿ ಪರಿಪಾಲಕರು
ಅರಣ್ಯ ಭವನ, ಬೆಂಗಳೂರು